

**‘ಮೊಗಳ್ಳಿ ವಿಮರ್ಶೆ’ ಮುಂತಾದ ಕೃತಿಗಳಲ್ಲಿ ಅನೇಕ ಮಹತ್ವದ ಲೇಖಕರನ್ನು ಖಂಡಿಸಿ, ಅವರ ಸಾಹಿತ್ಯದ ಜಾತಿ ಬೇರುಗಳ ಬಗ್ಗೆ ವ್ಯಗ್ರವಾಗಿ ಬರೆದಿರಿ. ಈ ಪರಿಯ ಸಿಟ್ಟು, ಸಂಘರ್ಷ, ನಿರಾಕರಣೆಯ ಅಗತ್ಯವಿದೆ ಅಂತ ಯಾಕೆ ಅನ್ನಿಸಿತ್ತು?**

ಬಿ. ಬಸವಲಿಂಗಪ್ಪನವರು ಹೇಳಿದ್ದ ಬೂಸಾ ಸಾಹಿತ್ಯದ ಹೇಳಿಕೆ ನನ್ನೊಳಗೆ ಸಂಚಲನ ಉಂಟು ಮಾಡಿತ್ತು. ಇದಕ್ಕೂ ಮೀರಿ ನಾನು ಗಾಢವಾಗಿ ಲೇಖಕರ ಜಾತಿಗಳ ಅನುಭವಗಳು ಹೇಗೆ ಮೇಲರಿಮೆಯ ಕಣ್ಣೋಟದಲ್ಲಿ ಸಾಹಿತ್ಯ ಸೃಷ್ಟಿಸುತ್ತವೆ ಎಂಬುದನ್ನು ಹತ್ತಿರದಿಂದ ಕಂಡು ವ್ಯಗ್ರನಾಗಿದ್ದೆ. ನನ್ನ ವ್ಯಗ್ರತೆಯನ್ನು ಅನೇಕರು ತಪ್ಪಾಗಿ ವ್ಯಾಖ್ಯಾನಿಸುತ್ತಾರೆ. ಅದೆಲ್ಲ ಏನಾದರೂ ಇರಲಿ, ಅದು ನನ್ನ ಸಮಸ್ಯೆ ಅಲ್ಲ. ಬಿ. ಕೃಷ್ಣಪ್ಪ ಮೊದಲ ಬಾರಿಗೆ ಕುವೆಂಪು ಕಾದಂಬರಿಗಳಲ್ಲಿ ದಲಿತರು ಚಿತ್ರಿತಗೊಂಡಿರುವ ಬಗ್ಗೆ ಪ್ರಶ್ನೆ ಎತ್ತಿದ್ದರು. ನಂತರ ದೇವಯ್ಯ ಹರವೆ ಅವರು ಕುವೆಂಪು ಕಾದಂಬರಿಗಳ ಫ್ಯೂಡಲ್ ಮೌಲ್ಯಗಳ ಬಗ್ಗೆ ತಣ್ಣಗೆ ಪ್ರಶ್ನಿಸಿದ್ದರು. ನಾನು ಕುವೆಂಪು ಅವರು ಬರೆದ ದಲಿತ ಕೇಂದ್ರಿತ ನಾಟಕಗಳನ್ನು ಅರಿತು ಕುವೆಂಪು ಪರ ಇದ್ದೆ. ಒಬ್ಬ ಲೇಖಕ ಕೇವಲ ಸಾಮಾಜಿಕ ನ್ಯಾಯದ ವಕ್ತಾರನಲ್ಲ. ಹಾಗೆ ವಕೀಲಿತನ ಮಾಡಿದ ಕೂಡಲೇ ಸಾಹಿತ್ಯ ಸಂವೇದನೆಯ ಅಖಂಡತೆಯೇ ಅಂದರೆ ಸೃಜನಶೀಲತೆಯ ಪ್ರಾಣವೇ ಹಾರಿ ಹೋಗುತ್ತದೆ. ನೀವು ಹೇಳಿದಂತೆ ಸಿಟ್ಟು, ಸಂಘರ್ಷ, ನಿರಾಕರಣೆ ನನ್ನ ವಿಮರ್ಶೆಯಲ್ಲಿ ಇದೆ, ಖಂಡಿತಾ ಇದೆ. ಇದು ನನ್ನ ನಿರೂಪಣೆಯ ಕಿಚ್ಚು. ಗತಕಾಲದ ಅಷ್ಟೂ ಮೌನದ ತೊಳಲಾಟಗಳು ನಿರ್ಭಯವಾಗಿ ವ್ಯಕ್ತವಾಗುವಾಗ ಒಂದು ಬಗೆಯ ಭಗ್ನತೆ ಉಂಟಾಗುತ್ತದೆ. ದಲಿತರು ನಯವಾಗಿ ಹೇಳಲಾಗದಷ್ಟು ವಿಷಾದ ಒಳಗೆ ಹೆಪ್ಪುಗಟ್ಟಿರುತ್ತದೆ. ಸಾಹಿತ್ಯದ ಹೆಜಮನಿಯನ್ನು ಪ್ರಶ್ನಿಸಬೇಕಾಗುತ್ತದೆ. ದಲಿತರು ವಿಮರ್ಶೆ ಮಾಡುವುದಿಲ್ಲ; ಅವರು ಪ್ರತಿಭಟಿಸುತ್ತಾರೆ. ಕನ್ನಡ ಸಾಹಿತ್ಯವು ದಲಿತರ ಅಸಹನೀಯತೆಯನ್ನು ಮನ್ನಿಸಿ ಒಪ್ಪಿಕೊಂಡಿದೆ. ಅಷ್ಟರಮಟ್ಟಿಗೆ ಕನ್ನಡ ಸಾಹಿತ್ಯದಲ್ಲಿ ಸಹನೆ, ಸಹಸ್ಪಂದನ ಹಾಗೂ ಭಿನ್ನಾಭಿಪ್ರಾಯಗಳನ್ನು ಗೌರವಿಸುವ ದೊಡ್ಡ ಪರಂಪರೆಯೇ ಪ್ರಾಚೀನ ಕಾಲದ ಕವಿಗಳಿಂದಲೂ ಸಾಗಿ ಬಂದಿದೆ. ಹಾಗೆಯೇ ಮತೀಯವಾಗಿ ಸಂಘರ್ಷಗಳೂ ಆಗಿವೆ. ಹರಿದಾಸರು ಏನನ್ನ ಭಜಿಸಿದರು, ಶರಣರು ಯಾವ ನುಡಿಯ ಆಡಿದರು, ತತ್ವಪದಕಾರರು ಹೇಗೆ ಭಿನ್ನ ಆದರು ಎಂಬುದನ್ನು ಗಮನಿಸಬಹುದು. ದಲಿತ ಬಂಡಾಯವೂ ಒಂದು ಬಗೆಯಲ್ಲಿ ಪ್ರತಿರೋಧದ ಚಳವಳಿಯಾಗಿ ಮಾರ್ಪಡಲಿಲ್ಲವೆ? ಅಲ್ಲದೆ ನನ್ನ ವಿಮರ್ಶಾ ಮಾನದಂಡಗಳು ಸಮಾಜ ವಿಜ್ಞಾನಗಳ ಮೂಲಕ ಬಂದಂತವು. ಕಾವ್ಯಮೀಮಾಂಸೆಯ ಪರಿಕಲ್ಪನೆಗಳನ್ನು ನಾನು ಮುಟ್ಟಲೇ ಇಲ್ಲ. ಅವುಗಳ ಮೂಲಕ ನಾನು ಸಂವಾದ ಹೂಡಲು ಪ್ರಶ್ನಿಸಲು ಅವಕಾಶವೇ ಇರಲಿಲ್ಲ. ನನ್ನ ವಿಮರ್ಶೆಗೆ ನನ್ನ ಊರುಕೇರಿಯ ಭಗ್ನ ಬದುಕಿನ ಪರಿಕರಗಳೇ ಆಸರೆಯಾಗಿ ಒದಗಿಬಂದವು.



- **ಭಗ್ನತೆ, ಭಂಜಕತನ, ಮುರಿದು ನುಡಿವ**